

ವಿಜಯಪುರದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಪಥಸಂಚಲನಕ್ಕೆ ಅಂಗವಿಕಲ ಮಕ್ಕಳು ತಂದ ಆರ್ದ್ರತೆ



ಶಿವಮೊಗ್ಗದ ಶಿವಕುಮಾರ್ ಅವರ ಅಂಗವೈಕಲ್ಯವನ್ನು ಮೀರಿ ಹಬ್ಬಿರುವ ಕನ್ನಡ ಪ್ರೇಮ

(ಮೆದುಳಿನ ಪಾರ್ಶ್ವವಾಯು), ಸ್ನಾಯು ಕ್ಷಯ, ಆಟಿಸಂ, ನಿರ್ದಿಷ್ಟ ಕಲಿಕೆಯ ಅಸಾಮರ್ಥ್ಯಗಳು, ಬಹು ಅಂಗಾಂಗ ನ್ಯೂನತೆ, ಮಾನಸಿಕ ಕಾಯಿಲೆಗಳು 'ಬೆಂಚ್ ಮಾರ್ಕ್ ಡಿಸೆಬಿಲಿಟಿ' ಗುಂಪಿಗೆ ಸೇರುತ್ತವೆ. 2021ರಲ್ಲಿ ದೇಶದಾದ್ಯಂತ ವಿವಿಧ ಶ್ರೇಣಿಯ 3566 ಉದ್ಯೋಗಗಳು 'ಬೆಂಚ್ ಮಾರ್ಕ್ ಡಿಸೆಬಿಲಿಟಿ' ಇರುವವರಿಗೆ ಮೀಸಲಿದ್ದವು. ಆದರೆ ಕೆಲಸ ದೊರಕಿದ್ದು ಕೇವಲ ಅರ್ಧದಷ್ಟು ಜನರಿಗೆ ಮಾತ್ರ.

## ಅಂಗವೈಕಲ್ಯಗಳ ಸರ್ಕಾರಿ ಪಟ್ಟಿ

2016ಕ್ಕೂ ಮುಂಚೆ ಆರೋಗ್ಯ ಇಲಾಖೆಯು ಕೇವಲ ಏಳು ಬಗೆಯ ಮಾನಸಿಕ ಹಾಗೂ ದೈಹಿಕ ನ್ಯೂನತೆಗಳನ್ನು ಅಂಗವೈಕಲ್ಯಗಳೆಂದು ಪರಿಗಣಿಸುತ್ತಿತ್ತು. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯು ಜಾರಿ ಮಾಡಿರುವ ಆರ್‌ಪಿಡಬ್ಲ್ಯುಡಿ – ಆಫ್ ಪರ್ಸನ್ಸ್ ವಿಥ್ ಡಿಸೆಬಿಲಿಟಿ ಆಕ್ಟ್ 2016ರ ಪ್ರಕಾರ 21 ದೈಹಿಕ–ಮಾನಸಿಕ ನ್ಯೂನತೆಗಳನ್ನು ಅಂಗವೈಕಲ್ಯಗಳೆಂದು ಪ್ರಮಾಣೀಕರಿಸಲಾಗಿದೆ. ಅವುಗಳೆಂದರೆ:

1. ಕುರುಡುತನ
2. ಕಡಿಮೆ ದೃಷ್ಟಿ (ಮಸುಕು)
3. ಕುಷ್ಠರೋಗ ವಾಸಿಯಾದ ವ್ಯಕ್ತಿಗಳು
4. ಶ್ರವಣ ದೋಷ (ಕಿವುಡುತನ)
5. ಚಲನೆಯ ಅಸಾಮರ್ಥ್ಯ
6. ಕುಬ್ಜತೆ
7. ಬೌದ್ಧಿಕ ಅಸಾಮರ್ಥ್ಯ
8. ಮಾನಸಿಕ ಅಸ್ವಸ್ಥತೆ
9. ಆಟಿಸಂ ಸ್ಪೆಕ್ಟರ್ ಡಿಸಾರ್ಡರ್
10. ಮಸ್ಕ್ಯುಲರ್ ಡಿಸ್ಟ್ರೊಫಿ
11. ದೀರ್ಘಕಾಲದ ನರವೈಜ್ಞಾನಿಕ ಪರಿಸ್ಥಿತಿ
12. ನಿರ್ದಿಷ್ಟ ಕಲಿಕೆಯಲ್ಲಿ ಅಸಮರ್ಥತೆ
13. ಮಲ್ಟಿಪಲ್ ಸ್ಕ್ಲೆರೋಸಿಸ್
14. ಮಾತು ಮತ್ತು ಭಾಷಾ ಅಸಾಮರ್ಥ್ಯ
15. ತಲಸ್ಸೇಮಿಯಾ
16. ಹಿಮೊಫೀಲಿಯಾ
17. ಸಿಕೆಲ್ ಸೆಲ್ ರೋಗ

- ವಿಶ್ವ ಆರೋಗ್ಯ ಸಂಸ್ಥೆಯ ಅಧ್ಯಯನದ ವರದಿಯಂತೆ ಜಗತ್ತಿನ ಜನಸಂಖ್ಯೆಯ ಶೇ. 16ರಷ್ಟು ಮಂದಿ ಒಂದಲ್ಲ ಒಂದು ಬಗೆಯ ಅಂಗವೈಕಲ್ಯ ಹೊಂದಿದ್ದಾರೆ. ಅಂದರೆ 130 ಕೋಟಿ ಜನ ಅಂಗವಿಕಲರಿದ್ದಾರೆ. ದುರಂತವೆಂದರೆ ಇದರ ಶೇ. 80ರಷ್ಟು ಜನ ಕಡಿಮೆ ಆದಾಯವಿರುವ ರಾಷ್ಟ್ರಗಳಲ್ಲಿದ್ದಾರೆ.